# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2861** |
| ಉತ್ತರಿಸಬೇಕಾದ ದಿನಾಂಕ | : | 30.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಸುಂಡಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿ ಡಿಸೆಂಬರ್ 1993 ರ ಅವಧಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಉಚಿತವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ ; | ಹೌದು. |
| ಆ) | ಸದರಿ ಸರ್ವೆ ನಂಬರ್ ನಲ್ಲಿರುವ ನಿವೇಶನಗಳ ಪೈಕಿ ಪರಭಾರೆ ಅವಧಿ ಮುಗಿದ ನಂತರ ಮೂಲ ಹಕ್ಕು ಪತ್ರದಾರರಿಂದ ನಿವೇಶನವನ್ನು ಕ್ರಯಕ್ಕೆ ಪಡೆದು, ಗ್ರಾಮ ಪಂಚಾಯಿತಿ ಪರವಾನಗಿ ಪಡೆಯದೇ ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮಗಳೇನು ; (ಒತ್ತುವರಿದಾರರ ಪೂರ್ಣ ವಿವರ ನೀಡುವುದು) | ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಸುಂಡಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿ ಡಿಸೆಂಬರ್ 1993 ರ ಅವಧಿಯಲ್ಲಿ ಆಶ್ರಯ ಯೋಜನೆಯಡಿ ಸರ್ಕಾರದಿಂದ ಉಚಿತವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವುದಾಗಿ ಅಪರ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರು ವರದಿ ಮಾಡಿರುತ್ತಾರೆ.<br><br>ದಿನಾಂಕ:18.11.2014 ರಂದು ಶ್ರೀ ಶಿವರಾಜು ಬಿನ್ ಲೇಟ್ ಲಿಂಗಯ್ಯರವರಿಗೆ ಸುಂಡಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿ 28 x 38 ಚದರ ಅಡಿಗಳಿಗೆ ಕಟ್ಟಡ ಪರವಾನಿಗೆಯನ್ನು ನೀಡಿದ್ದು, ಬೇರೆ ಯಾವುದೇ ಫಲಾನುಭವಿಗಳಿಗೆ ಪರವಾನಗಿ ನೀಡಿರುವುದಿಲ್ಲ ಹಾಗೂ ಒಂದು ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಮನೆಗಳು ನಿರ್ಮಾಣವಾಗಿರುವುದಿಲ್ಲ. ಶ್ರೀ ಶಿವರಾಜು ಬಿನ್ ಲೇಟ್ ಲಿಂಗಯ್ಯರವರು 30 x 40 ಅಡಿಗಳ ನಿವೇಶನವನ್ನು ಅವರ ತಾಯಿಯಿಂದ ದಾನ ಪತ್ರವಾಗಿ ಪಡೆದಿದ್ದು, ಪ್ರಸ್ತುತ 44 x 45 ಅಡಿಗಳ ಮನೆಯನ್ನು ನಿರ್ಮಿಸಿರುವುದಾಗಿ, ಹೆಚ್ಚುವರಿ ನಿರ್ಮಿಸಲಾದ ಕಟ್ಟಡವನ್ನು ಕೆಡವಿ ಹಾಕಲು ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಕ್ರಮ ವಹಿಸುವುದಾಗಿ ಅಪರ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ಇವರು ವರದಿ ಮಾಡಿರುತ್ತಾರೆ. |
| ಇ) | ಈ ರೀತಿ ಕಾನೂನು ಬಾಹಿರವಾಗಿ ಎಷ್ಟು ಅಡಿ ಅಳತೆಯಲ್ಲಿ ಮನೆ ನಿರ್ಮಿಸಲಾಗಿದೆ ; ಒತ್ತುವರಿ ನಿವೇಶನದಲ್ಲಿ ನಿರ್ಮಿಸಲಾದ ಕಟ್ಟಡವನ್ನು ಕೆಡವಿ ಹಾಕಲು ಯಾವ ಕ್ರಮ ಕೈಗೊಳ್ಳಲಾಗುವುದು ; (ಪೂರ್ಣ ವಿವರ ನೀಡುವುದು) | |
| ಈ) | ಬಾಕಿ ಉಳಿದಿರುವ 41 ಸೈಟುಗಳಲ್ಲಿ | ಸದರಿ ಸರ್ವೆ ನಂ. 89 ರಲ್ಲಿ ನಿವೇಶನ ಪಡೆದಿರುವ ಒಟ್ಟು 42 ಫಲಾನುಭವಿಗಳ ಪೈಕಿ 41 ಫಲಾನುಭವಿಗಳು ಮನೆ |

| | | |
|---|---|---|
| | ಇದುವರೆವಿಗೂ ಮನೆ ನಿರ್ಮಾಣ ಮಾಡದೆ ಇರುವುದರಿಂದ, ಸೈಟನ್ನು ಹಿಂಪಡೆದು, ಯಾವುದಾದರೂ ಸರ್ಕಾರಿ ಉದ್ದೇಶಕ್ಕಾಗಿ ಬಳಸಲಾಗುವುದೇ ? | ನಿರ್ಮಿಸಿರುವುದಿಲ್ಲ. ಹಕ್ಕುಪತ್ರದಲ್ಲಿನ ಷರತ್ತಿನಂತೆ ಇದುವರೆಗೂ ಮನೆ ನಿರ್ಮಾಣ ಮಾಡದೇ ಇರುವುದರಿಂದ ನಿವೇಶನವನ್ನು ಹಿಂಪಡೆದು, ತಾಲ್ಲೂಕು ಪಂಚಾಯಿತಿಯಿಂದ ಬೇರೆ ಉದ್ದೇಶಕ್ಕೆ ಬಳಸಲು ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಕ್ರಮ ವಹಿಸುವುದಾಗಿ ಅಪರ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ಇವರು ವರದಿ ಮಾಡಿರುತ್ತಾರೆ. |

ಸಂಖ್ಯೆ :ವಇ 216 ಹೆಚ್‌ಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು